ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ಬೀರವಳ್ಳಿ ಗ್ರಾಮದ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಿದ ಜಲ ಜೀವನ್ ಮಿಷನ್

ಕರ್ನಾಟಕದ ಪ್ರತಿ ಗ್ರಾಮದ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರನ್ನು ಒದಗಿಸುವ ಉದ್ದೇಶದಿಂದ ಅನುಷ್ಠಾನಗೊಂಡ ಯೋಜನೆಯೇ ಜಲ ಜೀವನ್ ಮಿಷನ್. ಈ ಮಹತ್ವಾಕಾಂಕ್ಷಿ ಯೋಜನೆ ನೀರಿನ ಸಮಸ್ಯೆಗೆ ಪೂರ್ಣವಿರಾಮ ಇಡುತ್ತಿರುವುದಲ್ಲದೇ, ಹೆಣ್ಣುಮಕ್ಕಳ ಜೀವನ ಮಟ್ಟವನ್ನು ಸುಧಾರಿಸಿದೆ. ಜಲ ಜೀವನ್ ಮಿಷನ್ ಯಶಸ್ವಿ ಅನುಷ್ಠಾನವಾಗಿರುವ ಗ್ರಾಮಗಳಲ್ಲಿ ಬೀರವಳ್ಳಿ ಗ್ರಾಮವೂ ಒಂದಾಗಿದೆ.

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಬೀರವಳ್ಳಿ ಗ್ರಾಮವೂ ಧಾರವಾಡ ಜಿಲ್ಲಾ ಕೇಂದ್ರದಿಂದ 55ಕಿ.ಮೀ ದೂರದಲ್ಲಿ ಹಾಗೂ ಕಲಘಟಗಿ ತಾಲೂಕು ಕೇಂದ್ರದಿಂದ 22ಕಿ.ಮೀ ದೂರವಿದೆ. ಬೀರವಳ್ಳಿ ಗ್ರಾಮ ಪಂಚಾಯಿತಿಯು ಬೀರವಳ್ಳಿ, ಬೆಂಡಲಘಟ್ಟಿ , ಆಸ್ತಕಟ್ಟಿ ಎಂಬ 3 ಗ್ರಾಮಗಳನ್ನು ಹೊಂದಿದೆ. ಬೀರವಳ್ಳಿ ಗ್ರಾಮವು ಒಟ್ಟು 490 ಮನೆಗಳಿವೆ, ಒಟ್ಟು 2184 ಜನಸಂಖ್ಯೆ , 331 ಪರಿಶಿಷ್ಟ ಜಾತಿ, 112 ಪರಿಶಿಷ್ಟ ಪಂಗಡ, ಇತರೆ 1736 ಜನ ಸಂಖ್ಯೆಯನ್ನು ಹೊಂದಿದೆ.

ಬೀರವಳ್ಳಿ ಗ್ರಾಮದ ನಿವಾಸಿಗಳು ಈ ಮೊದಲು ಕುಡಿಯುವ ನೀರಿಗೆ ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದರು. ಕೂಲಿ ಕೆಲಸಕ್ಕೆ ಹೋಗುವ ಗ್ರಾಮಸ್ಥರು ತಮ್ಮ ಮಕ್ಕಳನ್ನು ನೀರು ತುಂಬಲು ಬಿಟ್ಟು ತಾವು ದುಡಿಯಲು ಹೋಗುತ್ತಿದ್ದರು. ಇದರಿಂದ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದರು. ಪಾಲಕರ ದುಡಿಮೆಯೆ ? ಮಕ್ಕಳ ವಿದ್ಯಾಭ್ಯಾಸವೆ ? ಎಂಬ ಉಭಯ ಸಂಕಟ ಎದುರಾಗಿತ್ತು.

ಶುದ್ಧ ಕುಡಿಯುವ ನೀರು ಪಡೆಯುವಲ್ಲಿ ಸಂಕಷ್ಟಕ್ಕೆ ಒಳಗಾಗಿದ್ದ ಗ್ರಾಮದ ಜನರಲ್ಲಿ ಜಲ ಜೀವನ್ ಮಿಷನ್ ಯೋಜನೆ ಹೊಸ ಭರವಸೆಯನ್ನು ಮೂಡಿಸಿದೆ. ಈ ಯೋಜನೆಯಡಿ ಕಾರ್ಯಾತ್ಮಕ ಗೃಹನಳ ಸಂಪರ್ಕ ಕಲ್ಪಿಸುವ ಮೂಲಕ ಶುದ್ಧವಾದ ಹಾಗೂ ಸುರಕ್ಷಿತ ನೀರನ್ನು ಮನೆ ಮನೆಗೆ ಕಲ್ಪಿಸಿದೆ. ಅಲ್ಲದೇ, ಗ್ರಾಮದ ಕೆರೆ, ಬಾವಿ, ಹಳ್ಳಕೊಳ್ಳಗಳ ನೈರ್ಮಲ್ಯ ಕಾಪಾಡುವುದರ ಜೊತೆಗೆ ದನಕರುಗಳ ಬಾಯಾರಿಕೆ ಇಂಗಿಸಲು ಅನುಕೂಲಕರವಾಗಿದೆ. ಇದರಿಂದ ವೃದ್ಧರಿಗೆ, ಶಾಲಾಮಕ್ಕಳಿಗೆ, ಅನಾರೋಗ್ಯ ಪಿಡಿತರು, ಜನಸಾಮಾನ್ಯರಿಗೆ, ಬಾಣಂತಿಯರು, ಗರ್ಭಿಣಿ ಸ್ತ್ರಿಯರು ನೀರಿನ ಸಮಸ್ಯೆಯಿಂದ ಮುಕ್ತರಾಗಿದ್ದಾರೆ





**ಜಲ ಜೀವನ್ ಮಿಷನ್ ಅನುಷ್ಠಾನದ ಸಮಯದ ಸವಾಲುಗಳು :** ಜಲ ಜೀವನ್ ಮಿಷನ್ ಯೋಜನೆಯಡಿ ಜಲ ಮೂಲಗಳ ಸಂರಕ್ಷಣೆಯಿಂದ ಆಗುವ ಪ್ರಯೋಜನಗಳ ಮಾಹಿತಿಯನ್ನು ಗ್ರಾಮ ಪಂಚಾಯಿತಿಯವರು ಜಾಗೃತಿ ಮೂಡಿಸಿದರು. ನೀರಿನ ಮಿತ ಬಳಕೆ ಮತ್ತು ನೀರಿನ ಸಂರಕ್ಷಣೆಯ ಮಹತ್ವವನ್ನು ಗ್ರಾಮಸ್ಥರಿಗೆ ತಿಳಿಸಲಾಗಿದೆ. ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರು ನೀರಿನ ಗುಣಮಟ್ಟದ ಬಗ್ಗೆ ನಿಗಾವಹಿಸುತ್ತಿದ್ದಾರೆ. ಎಫಟಿಕೆ ಕಿಟ್ ಮೂಲಕ ನೀರನ್ನು ಪರೀಕ್ಷಿಸಿ ಜನರಿಗೆ ನೀರನ್ನು ನೀಡುತ್ತಿರುವುದರಿಂದ ಗ್ರಾಮಸ್ಥರಿಗೆ ನೀರಿನ ಶುದ್ಧತೆಯ ಬಗ್ಗೆಯೂ ಸಾಕಷ್ಟು ಅರಿವು ಮೂಡಿದೆ.

**ಜಲ ಜೀವನ್ ಮಿಷನ್ ಯೋಜನೆಯು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಬೀರವಳ್ಳಿ ಗ್ರಾಮದಲ್ಲಿ ಶುದ್ದ ಕುಡಿಯುವ ನೀರಿನ ಬರವನ್ನ ನೀಗಿಸುವ ಮೂಲಕ ಗ್ರಾಮಸ್ಥರಲ್ಲಿ ನೆಮ್ಮದಿ ಮೂಡಿಸಿದೆ.**